# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **7(99)** |
| ಸದಸ್ಯರ ಹೆಸರು | : | **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸಬೇಕಾದ ದಿನಾಂಕ | : | **08-12-2025** |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ಕೆಲವು ಹುದ್ದೆಗಳಿಗೆ ಹೊರಗಿನ ಪದವೀಧರರಿಗೆ ಅವಕಾಶ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಸರ್ಕಾರವು ಅವಕಾಶ ನೀಡುತ್ತಿದೆ? ಬಿ.ಎಸ್.ಸಿ ಫಾರೆಸ್ಟ್ರಿ ಪದವೀಧರರಿರುವಾಗ ಅರಣ್ಯ-ವನ್ಯಜೀವಿ ಪರಿಸರ ಶಾಸ್ತ್ರ ಓದದ ಇತರ ಪದವಿಧರರಿಗೆ ಡಿ.ಆರ್.ಎಫ್.ಒ, ಆರ್.ಎಫ್.ಒ ಹಾಗೂ ಎ.ಸಿ.ಎಫ್ ಹುದ್ದೆಗಳಿಗೆ ಅವಕಾಶ ನೀಡುವ ಸರ್ಕಾರದ ನೀತಿ ಯಾವ ಆಧಾರದ ಮೇಲೆ ನಡೆದಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು ಹಾಗೂ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಬಿ.ಎಸ್ಸಿ (ಅರಣ್ಯಶಾಸ್ತ್ರ) ಪದವೀಧರರಿಗೆ ಶೇಕಡ 50ರಷ್ಟು ರಿಕ್ತಸ್ಥಾನಗಳು ಮತ್ತು ಬಿ.ಎಸ್ಸಿ (ವಿಜ್ಞಾನ) ನಿಗದಿತ ಇಂಜಿನಿಯರಿಂಗ್ ಪದವೀಧರರಿಗೆ ಶೇಕಡ 50ರಷ್ಟು ರಿಕ್ತಸ್ಥಾನಗಳನ್ನು ನಿಗದಿಪಡಿಸಲಾಗಿರುತ್ತದೆ. |
| ಆ) | ರಾಜ್ಯದ ಬಿ.ಎಸ್ಸಿ. ಫಾರೆಸ್ಟ್ರಿ ಕಾಲೇಜುಗಳಿಗೆ ಪ್ರವೇಶ ಪಡೆಯಲು 96-98% ಮಟ್ಟದ ಕಟ್‌ಆಫ್ ಅಗತ್ಯವಿದ್ದು, ಇಷ್ಟು ಉನ್ನತ ಮಟ್ಟದ ಅರ್ಹತೆ ಇದ್ದರೂ ಸರ್ಕಾರದ ಫಾರೆಸ್ಟ್ರಿ ಪದವೀಧರರಿಗೆ ಮಾತ್ರ ಮೀಸಲಾದ ಅವಕಾಶಗಳನ್ನು ಕಡಿಮೆ ಮಾಡುತ್ತಿರುವುದು ಯಾವ ಉದ್ದೇಶಕ್ಕಾಗಿ. ಈ ಅವಕಾಶ ಕಡಿಮೆ ಮಾಡುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹೂಡಿಕೆ ಹಾಗೂ ಭವಿಷ್ಯಕ್ಕೆ ಹಾನಿಯಾಗುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ: (ಸಂಪೂರ್ಣವಾದ ಮಾಹಿತಿ ನೀಡುವುದು); | ನೇರ ನೇಮಕಾತಿಯಲ್ಲಿ ಬಿ.ಎಸ್ಸಿ. ಅರಣ್ಯಶಾಸ್ತ್ರ ಪದವಿಯನ್ನೆ ಕನಿಷ್ಟ ವಿದ್ಯಾರ್ಹತೆಯನ್ನಾಗಿ ಮಾಡುವ ಕುರಿತು ಅನೇಕ ಮನವಿಗಳು ಸ್ವೀಕೃತವಾಗಿದ್ದು, ಅವುಗಳನ್ನು ಪರಿಶೀಲಿಸಿ ವರದಿ ನೀಡಲು ದಿನಾಂಕ: 11-04-2025 ರಂದು ಹಿರಿಯ ಅಧಿಕಾರಿಗಳ ಸದಸ್ಯರ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು ಸಮಗ್ರವಾಗಿ ಅಧ್ಯಾಯನ ನಡೆಸಿ, ಸಮಗ್ರ ವರದಿ ನೀಡಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಇ) | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇರ ನೇಮಕಾತಿಯಲ್ಲಿ ಬಿ.ಎಸ್ಸಿ. ಅರಣ್ಯಶಾಸ್ತ್ರ ಪದವಿಯನ್ನೆ ಕನಿಷ್ಟ ವಿದ್ಯಾರ್ಹತೆಯನ್ನಾಗಿ ಮಾಡುವ ಕುರಿತು ಈವರೆಗೂ ಬಂದಿರುವ ಮನವಿಗಳು ಎಷ್ಟು: ಸದರಿ ಮನವಿಗಳಿಗೆ ಸರ್ಕಾರವು ಸ್ಪಂದಿಸಿದೆಯೇ: ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರವು ಈ ಮನವಿಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಯರೂಪಕ್ಕೆ ತರಲು ಕ್ರಮವಹಿಸುವುದು? (ಪೂರ್ಣ ಮಾಹಿತಿ ನೀಡುವುದು). | |

ಸಂಖ್ಯೆ: ಎಫ್‌ಇಇ 232 ಎಫ್‌ಇಜಿ 2025

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು